


# ಏಕಾಂಗಿ ಆಲಿಯಾ

ಆಲಿಯಾ ಭಟ್ 'ಹೈವೇ' ಚಿತ್ರದಲ್ಲಿ ಆಲಿಯಾರ ನಟನಾ ಸಾಮರ್ಥ್ಯ ಕಂಡು ಬೆರಗಾಗಿದ್ದವರು, 'ಕಾಫಿ ವಿಥ್ ಕರಣ್' ಕಾರ್ಯಕ್ರಮದಲ್ಲಿ ಆಕೆಯ ಪೆದ್ದುತನವನ್ನು ಕಂಡು ನಕ್ಕಿದ್ದರು. ಈಗ ಅಲಿಯಾ ಮತ್ತೆ ಸುದ್ದಿ ಮಾಡಿದ್ದಾರೆ. ಅದೂ ತನ್ನ ಹೃದಯ ಖಾಲಿ ಎಂದು ಹೇಳುವ ಮೂಲಕ.

ಅಲಿಯಾ ನಟಿಸಿರುವ ಎರಡೂ ಸಿನಿಮಾಗಳ ನಾಯಕ ನಟರ ಜೊತೆ ಅಲಿಯಾಳ ಹೆಸರು 'ಅಂಟಿ'ಕೊಂಡಿತ್ತು. ಅಲಿಯಾ, ವರುಣ್ ಧವನ್ ಮತ್ತು ಅರ್ಜುನ್ ಕಪೂರ್ ಇಬ್ಬರ ಜೊತೆಗೂ ತಿರುಗಾಟ ನಡೆಸಿದ್ದರು. ಇದು ಸಿನಿಮಾ ಗೆಳೆತನ ಅಲ್ಲ, ಪ್ರೇಮವೂ ಇದೆ ಎಂಬ ಗುಸು ಗುಸು ಬಿ-ಟೌನಿನ ಗಲ್ಲಿಗಳಲ್ಲಿ ಹರಡಿತ್ತು. ಆದರೆ ಅದೆಲ್ಲಾ ಸುಳ್ಳು ಎಂದಿದ್ದಾರೆ ಅಲಿಯಾ.

ಎರಡು ವರ್ಷದಿಂದ ಆಕೆ ಯಾರೊಂದಿಗೂ ಡೇಟಿಂಗ್ ನಡೆಸಿಲ್ಲವಂತೆ. 'ಸಹನಟರೊಂದಿಗೆ ಸಂಬಂಧವಿದೆ ಎಂಬ ರೂಮರ್‌ಗಳನ್ನೆಲ್ಲಾ ಅಭಿಮಾನಿ-ಗಳು ನಂಬಬಾರದು. ಅವೆಲ್ಲವೂ ಆಧಾರರಹಿತ. ಕಳೆದ ಎರಡು ವರ್ಷಗಳಿಂದ ಯಾರೊಂದಿಗೂ ಡೇಟಿಂಗ್ ನಡೆಸಿಲ್ಲ. ನಾನು ಸಂಪೂರ್ಣ ಒಂಟಿ' ಎಂದಿದ್ದಾಳೆ ಅಲಿಯಾ.

'ಹೈವೇ'ಯಂಥ ಗಂಭೀರ ಸಿನಿಮಾದಲ್ಲಿ ಪ್ರಬುದ್ಧ ಅಭಿನಯ ನೀಡಿ ಗಮನ ಸೆಳೆದಿದ್ದ ಅಲಿಯಾರಿಗೆ ಈಗ ಸಂಪೂರ್ಣ ಹಾಸ್ಯಪ್ರಧಾನ ಪಾತ್ರ ಮಾಡುವ ಆಸೆಯಂತೆ. ತಮ್ಮ ಸಾಮಾನ್ಯ ಜ್ಞಾನದ ಬಗ್ಗೆ ಸಿಕ್ಕಾಪಟ್ಟೆ ಜೋಕುಗಳು ಹರಿದಾಡುತ್ತಿದ್ದರೂ ಅಲಿಯಾ ಅದರ ಬಗ್ಗೆ ಬೇಸರಗೊಂಡಿಲ್ಲವಂತೆ. ಸಿನಿಮಾ ಪ್ರೀತಿಯ ಜೊತೆಗೆ ಬೇರೆ ಪ್ರೀತಿಯ ಸಹವಾಸ ಬೇಡ ಸದ್ಯಕ್ಕೆ ಎನ್ನುತ್ತಿದ್ದಾರೆ ಅವರು.



# ಕರೀನಾ ಹೊಸ ಸೂತ್ರ

ಬಾಲಿವುಡ್‌ನಲ್ಲಿ ತನ್ನ 'ನಂಬರ್ ಒನ್' ಪಟ್ಟವನ್ನು ಯಾರಿಂದಲೂ ಅಲುಗಾಡಿಸಲು ಸಾಧ್ಯವೇ ಇಲ್ಲ ಎಂದು ಹಿಂದೊಮ್ಮೆ ಬೀಗುತ್ತಿದ್ದ ಕರೀನಾ ಕಪೂರ್, ಆ ಸ್ಥಾನವನ್ನು ಕಳೆದುಕೊಂಡು ವರ್ಷವೇ ಕಳೆದಿದೆ. ದೀಪಿಕಾ ಪಡುಕೋಣೆ, ಕತ್ರಿನಾ ಕೈಫ್‌ರಂತಹ ನಟಿಯರಿಗೆ ಏರುತ್ತಿರುವ ಬೇಡಿಕೆ ಮತ್ತು ಅವರು ನೀಡುತ್ತಿರುವ ಹಿಟ್ ಸಿನಿಮಾಗಳನ್ನು ಕಂಡು ಕರೀನಾ ಬೆರಗಾಗಿದ್ದಾರೆ. ಆದರೂ ತಾನು ನಂಬರ್ ಒನ್ ನಟಿಯ ಸ್ಥಾನ ಕಳೆದು-ಕೊಂಡಿದ್ದೇನೆ ಎಂದು ಕರೀನಾ ಎಲ್ಲಿಯೂ ಹೇಳಿಕೊಂಡಿಲ್ಲ. ಪೈಪೋಟಿಯ ಮಧ್ಯೆ ಆಗಾಗ್ಗೆ ತಲೆ ಎತ್ತಿ ಗೆಲುವು ಕಾಣುವ ಹೋರಾಟ ನಡೆಸಿದ್ದರೂ ಆಕೆ ಸಫಲಳಾಗಿಲ್ಲ.

ಈಗ ಸಿನಿಮಾ ಆಯ್ಕೆಯಲ್ಲಿ ಬೇಬೊ ಹೊಸ ದಿಕ್ಕಿನೆಡೆಗೆ ಆಲೋಚಿಸಲು ಶುರು ಮಾಡಿದ್ದಾಳಂತೆ. 'ಗೆಳೆತನ, ಆತ್ಮೀಯತೆಯ ಕಾರಣಕ್ಕೆ ಹಿಂದೆ ಸಾಕಷ್ಟು ಸಿನಿಮಾಗಳನ್ನು ಮಾಡಿದ್ದೇನೆ. ಇನ್ನು ಮುಂದೆ ಒಳ್ಳೆಯ ಕಥೆ ಆಧಾರಿತ ಸಿನಿಮಾಗಳೇ ನನ್ನ ಆಯ್ಕೆ' ಎಂದಿದ್ದಾಳೆ ಕರೀನಾ. ಪಾತ್ರಗಳಲ್ಲಿ ಹೊಸತನ, ವೈವಿಧ್ಯವಿರಲಿ ಎಂದು 'ಚಮೇಲಿ', 'ತಲಾಶ್'ನಂಥ ಚಿತ್ರಗಳಲ್ಲಿ ನಟಿಸಿದ್ದೆ. ಅವು ನನ್ನ ವೃತ್ತಿ ಬದುಕಿನಲ್ಲಿ ಅದ್ಭುತ ಚಿತ್ರಗಳಾಗಿ ಹೊರಹೊಮ್ಮಿದವು. ಕಮರ್ಷಿಯಲ್ ಚಿತ್ರಗಳನ್ನೂ ಸಾಕಷ್ಟು ಒಪ್ಪಿಕೊಂಡೆ. ಇನ್ನು ಮುಂದೆ ಕಮರ್ಷಿಯಲ್ ಚಿತ್ರಗಳಿಗಿಂತ ಒಳ್ಳೆಯ ಕಥೆ ಮತ್ತು ನಟನೆಯ ಅವಕಾಶವಿರುವ ಚಿತ್ರಗಳಿಗೇ ಆದ್ಯತೆ- ಎನ್ನುವುದು ಕರೀನಾಳ ಹೊಸ ಸೂತ್ರ.

■ ಅಮಿ